ದಿನಾಂಕಃ 30.01.2024 ರಂದು ಪ್ರಮಾಣ ವಚನ ಬೋಧಿಸಲಾಗಿದೆ
ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಹೆಚ್.ಕೆ.ಪಿ ವಕೀಲರಿಂದಃ

1) ನಮ್ಮ ಮನೆಗೂ ಮತ್ತು ಆರೋಪಿಗಳ ಮನೆಗೂ ಅಂದಾಜು 30 ರಿಂದ 40 ಅಡಿ ದೂರ ಆಗುತ್ತದೆ. ರಸ್ತೆ ಮತ್ತು ಆರೋಪಿಗಳ ಮನೆ ಮಧ್ಯೆ ಖಾಲಿ ನಿವೇಶನ ಇದೆ ಎಂದರೆ ಸರಿ. ಆರೋಪಿಗಳ ಮನೆ ಅಲ್ಲದೇ ಬೇರೆ ಬೇರೆಯವರ ಮನೆಗಳುಅಲ್ಲಿ ಇವೆ ಎಂದರೆ ಸರಿ. ಚಾಸಾ.4 ಹರೀಶ ರವರ ತಂದೆ ಹೆಸರು ಗೊತ್ತಿಲ್ಲ. ಅವರ ತಂದೆಯ ಊರು ಬಿಂಡೇನಹಳ್ಳಿ.

2) ದಿಃ 21.05.2020 ರಂದು ಗಲಾಟೆಯಾಗಿತ್ತು. ನನ್ನ ಮಗನ ಮೇಲೆ ಕೊಲೆ ಪ್ರಯತ್ನ ನಡೆದಿತ್ತು ಎಂದು ನಾನು ಅ ದಿನವೇ ದೂರನ್ನು ನೀಡುವ ಪ್ರಯತ್ನ ಮಾಡಲಿಲ್ಲ. ಆ ದಿವಸ ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲರಲ್ಲಿಲ ಅದ್ದರಿಂದ ನಾನು ದೂರನ್ನು ನೀಡಿರಲಿಲ್ಲ ಎಂದರೆ ಸರಿಯಲ್ಲ. ಆ ಘಟನೆಯ ನಂತರ ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಿಃ23.05.2020 ರಂದು ನಾನು ಪೊಲೀಸ್ ಠಾಣೆಗೆ ಹೋಗಿದ್ದೆ. ಪೊಲೀಸರು ಮನೆಗ ಬಂದು ಬಾಯಿ ಮಾತಿನಲ್ಲಿ ಠಾಣೆಗೆ ಬರುವಂತೆ ಹೇಳಿದ್ದರು, ನೋಟಿಸನ್ನು ಕೊಟ್ಟಿರಲಿಲ್ಲ. ನಾನು ಪೊಲೀಸ್ ಠಾಣೆಗೆ ಹೋದಾಗ ಅಲ್ಲಿ ಪೊಲೀಸಿನವರು ಯಾರು ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. ನಾನು ಠಾಣೆಗೂ ಹೋಗಿಲ್ಲ, ಯಾವುದೇ ರೀತಿ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ''ಗಲಾಟೆಯಲ್ಲಿ ನನ್ನ ಮಗ ಚಾಸಾ 1 ರವರು ಬಾಯಿ ಬಡಿದುಕೊಳ್ಳುತ್ತಿದ್ದುದು ಕೇಳಿಸಿತು'' ಎಂಬ ಸಂಗತಿಯನ್ನು ನಾನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ ಎಂದರೆ ಸಾಕ್ಷಿಯು, ನ್ಯಾಯಾಲಯದಲ್ಲಿ ಮತ್ತು ನನ್ನ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದು ನುತಿಡಿಯುತ್ತಾರೆ. ಮೇಲಿನ ಸಂಗತಿಯನ್ನು ನನ್ನ ಹೇಳಿಕೆಯಲ್ಲಿ ಹೇಳದೇ ಇದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ''ಮನೆಯಲ್ಲಿ ನನ್ನ ಯಜಮಾನರು ಮತ್ತು ನನ್ನ ಮಗಳು ಇದ್ದರು'' ಎಂಬ ಸಂಗತಿಯನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಹೇಳಿದ್ದೇನೆ ಮತ್ತು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಹೇಳಿಕೆಯಲ್ಲಿ ಮೇಲೆ ಹೇಳಿದ ಸಂಗತಿಯನ್ನು ಹೇಳಿಲ್ಲದೇ ಇದ್ದರೂ ಸಹ ಹೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ''2 ನೇ ಆರೋಪಿ ವಿದ್ಯಾ, ಚಾಸಾ.1 ರವರ ಬೆನ್ನಿಗೆ ದೊಣ್ಣೆಯಿಂದ ಹೊಡೆದರು '' ಎಂದು ಹೇಳಿದ್ದೇನೆ ಎಂದರೆ ಸರಿ. '' ವಿದ್ಯಾ, ತನ್ನ ಕೈಯ್ಯಲ್ಲಿ ಇದ್ದ ದೊಣ್ಣೆಯಿಂದ ಚೇತನ್ ನನ್ನು ಕೊಲೆ ಮಾಡುವ ಉದ್ದೇಶದಿಂದ, ಚೇತನ್ ನ ತಲೆಗೆ ಬೀಸಿದಾಗ, ಚೇತನ್ ಕೆಳಕ್ಕೆ ಕುಳಿತುಕೊಂಡು ತಪ್ಪಿಸಿಕೊಂಡ'' ಅಂತ ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿ.

3) ''ದಿಃ 21.05.2020 ರಂದು ಸಂಜೆ 6.00 ಗಂಟೆಯಲ್ಲಿ ಕೊಟ್ಟಿಗೆ ಹತ್ತಿರ ಗಲಾಟೆ ಆಗುತ್ತಿದುದು ನನಗೆ ಕೇಳಿಸಿತು. ಗಲಾಟೆಯಲ್ಲಿ ನನ್ನ ಮಗನಾದ ಚಾಸಾ 1 ರವರು ಬಾಯಿ ಬಡಿದುಕೊಳ್ಳುತ್ತಿದ್ದುದು ಕೇಳಿಸಿತು. ಆಗ ನಾನು ನಮ್ಮ ಮನೆಯ ಒಳಗೆ ಇದ್ದೆನು. ಮನೆಯಲ್ಲಿ ನನ್ನ ಯಜಮಾನರು ಮತ್ತು ನನ್ನ ಮಗಳು ಇದ್ದರು. ನಾನು ಮತ್ತು ಚಾಸಾ 3 ರವರು ಕೊಟ್ಟಿಗೆ ಹತ್ತಿರ ಹೋದೆವು. ಆಗ ಅಲ್ಲಿ ಆರೋಪಿತರಾದ ಕೆಂಪೇಗೌಡ, ವಿಜಯಲಕ್ಷ್ಮಿ, ವಿದ್ಯಾ, ಕೃಷ್ಣೇಗೌಡ ಹಾಗೂ ವಿನಯ್, ಚಾಸಾ 1 ರವರಿಗೆ ಹೊಡೆಯುತ್ತಿದ್ದರು, 1 ನೇ ಆರೋಪಿತ ಕೆಂಪೇಗೌಡ ನ ಕೈಯ್ಯಲ್ಲಿ ಕುಡಗೋಲು ಇತ್ತು. 2 ನೇ ಆರೋಪಿತೆ ವಿದ್ಯಾ ಕೈಯಲ್ಲಿ ದೊಣ್ಣೆ ಇತ್ತು. ನಾನು ಮತ್ತು ಚಾಸಾ 3 ರವರು, ಚಾಸಾ 1 ರವರನ್ನು ಗಲಾಟೆ ಬಿಡಿಸಿಕೊಂಡು ಬಂದೆವು. ಆಗ 5 ಜನ ಆರೋಪಿತರು ನಮ್ಮ ಹಿಂದೆಗಡೆ ಬಂದು, 5 ನೇ ಆರೋಪಿತನಾದ ಕೃಷ್ಣೇಗೌಡ, 1 ನೇ ಆರೋಪಿತರಾದ ಕೆಂಪೇಗೌಡನಿಗೆ, ಇವರು ಇದ್ದರೆ ತಾನೇ ಈ ರೋಡ್ ನಲ್ಲಿ ಓಡಾಡುವುದು, ಇವರನ್ನು ಸಾಯಿಸಿಬಿಡು ಎಂದು ಹೇಳಿದನು. 1 ನೇ ಆರೋಪಿತರಾದ ಕೆಂಪೇಗೌಡ , ಕುಡುಗೋಲಿನಿಂದ ಚಾಸಾ 1 ರವರಿಗೆ ತಲೆಗೆ ಹೊಡೆಯಲು ಬಂದಾಗ ನನ್ನಮಗ ಬಲ ಕೈಯನ್ನು ಅಡ್ಡ ಕೊಟ್ಟಿದ್ದನು. ಆಗ ಆತನ ಬಲಗೈ ನ ಮುಂಗೈ ಮತ್ತು ಮೊಣಕೈಗೆ ಏಟು ಬಿದ್ದು ಗಾಯವಾಯಿತು. ಆಗ ಚಾಸಾ 1 ರವರು ಕೆಳಗೆ ಕುಳಿತುಕೊಂಡನು, ಆಗ 2 ನೇ ಆರೋಪಿತೆ ವಿದ್ಯಾ ಚಾಸಾ 1 ರವರ ಬೆನ್ನಿಗೆ ದೊಣ್ಣೆಯಿಂದ ಹೊಡೆದಳು. 3 ನೇ ಆರೋಪಿತೆ ವಿಜಯಲಕ್ಷ್ಮಿ ಕಾಲಿನಿಂದ ಚಾಸಾ 1 ರವರ ಬೆನ್ನಿಗೆ ಒದ್ದಳು. 4 ನೇ ಆರೋಪಿತ ವಿನಯ್, ಚಾಸಾ 1 ರವರನ್ನು ಕುರಿತು, ಸೂಳೆ ಮಗನೇ, ಬೋಳಿ ಮಗನೇ, ರೋಡಲ್ಲಿ ತಿರುಗಾಡಬೇಡ ಎಂದರೂ ತಿರುಗಾಡುತ್ತಿದ್ದೀಯಾ ಎಂದು ಬೈದನು. ಚಾಸಾ 3 ಮತ್ತು ಚಾಸಾ 4 ರವರು, ಚಾಸಾ 1 ರವರನ್ನು ಬಿಡಿಸಿಕೊಂಡು, ಚಿಕಿತ್ಸೆಗಾಗಿ ಚುಂಚನಗಿರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆರೋಪಿತರು, ಈ ಸಲ ಗೆದ್ದು ಹೋದಿರಿ, ತಿರುಗಾಡಬೇಡ ಎಂದರೂ, ಈ ರೋಡ್ ನಲ್ಲಿ ತಿರುಗಾಡುತ್ತೀಯಾ, ಮತ್ತೆ ಈ ರೋಡ್ ಗೆ ಬಂದರೆ ನಿನ್ನನ್ನು ಸಾಯಿಸಿಬಿಡುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿ ಹೆದರಿಸಿದರು. 1 ನೇ ಆರೋಪಿತ, ಚಾಸಾ 1 ರವರನ್ನು ಕೊಲೆ ಮಾಡಬೇಕು ಎಂಬ ಉದ್ದೇಶ ಇಟ್ಟುಕೊಂಡು ಕುಡುಗೋಲನ್ನು ಅವನ ತಲೆಗೆ ಬೀಸಿದನು. ಚಾಸಾ1 ರವರು, ಕುಡುಗೋಲು ಬೀಸಿದ್ದನ್ನು ಅವರ ಬಲಗೈಯಿಂದ ತಡೆಯದಿದ್ದರೆ ಅವರ ಕೊಲೆಯಾಗುತ್ತಿತ್ತು '' ಎಂದು ಮುಖ್ಯ ವಿಚಾರಣೆಯಲ್ಲಿ ನಾನು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

4) ಘಟನೆಗಿಂತ ಮುಂಚೆ ಮುಮಾ.1 ದೊಣ್ಣೆ ಮತ್ತು ಮು ಮಾ 2 ಕುಡುಗೋಲು, ನಮ್ಮ ಮನೆಯಲ್ಲಿ ಇದ್ದಂತಹ ವಸ್ತುಗಳು ಎಂದರೆ ಸರಿಯಲ್ಲ. ಈ ಪ್ರಕರಣಕ್ಕಾಗಿ ನಮ್ಮ ಮನೆಯಲ್ಲಿ ಇದ್ದ ಮುಮಾ.1 ದೊಣ್ಣೆ ಮತ್ತು ಮುಮಾ2 ಕುಡುಗೋಲು ಸೃಷ್ಟಿಸಿ ತಂದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನ ಮರಣಾ ನಂತರ, ಅವರ ಹೆಸರಿನಲ್ಲಿ ಇದ್ದ ಎಲ್ಲಾ ಸ್ವತ್ತುಗಳು ನನ್ನ ಹೆಸರಿಗೆ ಬಂದಿವೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಎಷ್ಟು ಆಸ್ತಿಗಳು ಇವೆ ಎಂದು ಗೊತ್ತಿಲ್ಲ. ನನ್ನ ಹೆಸರಿನಲ್ಲಿ 4 ವರೆ ಎಕರೆಗಿಂತ ಜಾಸ್ತಿ ಜಮೀನು ಇದೆ ಎಂದರೆ ಗೊತ್ತಿಲ್ಲ. 1 ನೇ ಆರೋಪಿಯಾದ ಕೆಂಪೇಗೌಡನ ಹೆಸರಿನಲ್ಲಿ ಒಟ್ಟು ಎಷ್ಟು ಜಮೀನುಗಳು ಇವೆ ಎಂದರೆ ಗೊತ್ತಿಲ್ಲ. 1 ನೇ ಆರೋಪಿ ಕೆಂಪೇಗೌಡನ ಹೆಸರಿನಲ್ಲಿ ಕೇವಲ 1 ವರೆ ಎಕರೆ ಜಮೀನು ಮಾತ್ರ ಇದೆ ಎಂದರೆ ಗೊತ್ತಿಲ್ಲ. ಈ ವಿಚಾರವಾಗಿ, 1 ನೇ ಆರೋಪಿ ಮತ್ತು ನನ್ನ ಗಂಡನ ಮಧ್ಯ ಸಮವಾಗಿ ಪಾಲಾಗಬೇಕು ಎಂದು, 2 ಮತ್ತು 4 ನೇ ಆರೋಪಿಗಳು ವಿಭಾಗಕ್ಕೆ ಅಸಲು ದಾವೆ ನಂಃ 316/2019 ದಾವೆಯನ್ನು ನಾಗಮಂಗಲ ನ್ಯಾಯಾಲಯದಲ್ಲಿ ಹಾಕಿಕೊಂಡಿದ್ದಾರೆ ಎಂದರೆ ಸರಿ. ಈಗ ನನಗೆ ತೋರಿಸಿದ ದಾಖಲೆಗಳು ಅಸಲು ದಾವೆ 316/2019 ಕ್ಕೆ ಸಂಬಂಧಪಟ್ಟ ವಾದ ಪತ್ರ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ಆರೋಪಿಗಳು ಅಸಲು ದಾವೆ 316/2019 ದಾವೆ ಹೂಡಿದ ನಂತರ, ಆರೋಪಿಗಳ ಮೇಲೆ ದಿಃ 01.03.2020 ರಂದು ಒಂದು ಸುಳ್ಳು ಕ್ರಿಮಿನಲ್ ಪ್ರಕರಣವನ್ನು ದಾಖಲು ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಸುಳ್ಳು ಪ್ರಕರಣಕ್ಕೆ ಬಗ್ಗದೇ ಇದ್ದ ಕಾರಣ, ಅಸಲು ದಾವೆ 316/2019 ನ್ನು ಹಿಂಪಡೆದುಕೊಳ್ಳಲು ಒತ್ತಡ ಹೇರುವ ದುರುದ್ದೇಶದಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿರುವಂತೆ ಯಾವುದೇ ರೀತಿ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿತರು, ಗಲಾಟೆ ಅಥವಾ ಕೊಲೆ ಪ್ರಯತ್ನವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳಿಕೆಯನ್ನು ನೀಡಿ, ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.